ಕರ್ನಾಟಕ ವಿಧಾನ ಪರಿಷತ್ತು

ಮಾನ್ಯ ವಿಧಾನ ಪರಿಷತ್ತು ಸದಸ್ಯರ ಹೆಸರು:	ಡಾ॥ ಜೈಮಾಲ ರಾಮಚಂದ್ರ
ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ:	288
ಉತ್ತರಿಸ ಬೇಕಾದ ದಿನಾಂಕ:	04.03.2020
ಉತ್ತರಿಸುವ ಸಚಿವರು	ಶ್ರೀ ವಿ. ಸೋಮಣ್ಣ, ವಸತಿ ಸಚಿವರು

ಕ್ರ. ಸಂ	ಪ್ರಶ್ನೆ	ಉತ್ತರ
ಅ)	ಕಳೆದ 03 ವರ್ಷಗಳಲ್ಲಿ ರಾಜೀವ್ ಗಾಂಧಿ ಹಾಗೂ ವಾಜಪೇಯಿ ವಸತಿ ಯೋಜನೆಯಡಿಯಲ್ಲಿ ಮಂಜೂರಾದ ಮನೆಗಳ ಸಂಖ್ಯೆ ಎಷ್ಟು: (ಸಂಪೂರ್ಣ ವಿವರ ನೀಡುವುದು)	ರಾಜ್ಯದಲ್ಲಿ ಕಳೆದ 3 ವರ್ಷಗಳಲ್ಲಿ ವಿವಿಧ ವಸತಿ ಯೋಜನೆಯಡಿ 1243757 ಮನೆಗಳನ್ನು ಮಂಜೂರು ಮಾಡಲಾಗಿದ್ದು, ಸದರಿ ಮನೆಗಳಲ್ಲಿ 541683 ಮನೆಗಳು ಪೂರ್ಣಗೊಂಡಿದ್ದು, 366973 ಮನೆಗಳು ವಿವಿಧ ಹಂತದಲ್ಲಿ ಪ್ರಗತಿಯಲ್ಲಿರುತ್ತದೆ. ಉಳಿದಂತೆ 315191 ಮನೆಗಳು ಪ್ರಾರಂಭವಾಗಬೇಕಾಗಿರುತ್ತದೆ. ವಿವರಗಳನ್ನು ಅನುಬಂಧ-1 ರಲ್ಲಿ ಲಗತ್ತಿಸಲಾಗಿದೆ.
ಆ)	ಸದರಿ ಮನೆಗಳ ನಿರ್ಮಾಣ ಕಾಮಗಾರಿಗೆ ಇಲ್ಲಿಯವರೆವಿಗೂ ಸರ್ಕಾರವು ಖರ್ಚು ಮಾಡಿರುವ ವೆಚ್ಚವೆಷ್ಟು :	ವಿವಿಧ ವಸತಿ ಯೋಜನೆಗಳಡಿ ಕಳೆದ 3 ವರ್ಷಗಳಲ್ಲಿ ಅಂದರೆ 2016-17ನೇ ಸಾಲಿನಿಂದ 2019-20ನೇ ಸಾಲಿನ ಜನವರಿ ಅಂತ್ಯದವರೆಗೆ ರೂ.17,004.89ಕೋಟಿಗಳನ್ನು ಖರ್ಚುಮಾಡಲಾಗಿದೆ.
ಇ)	ಸದರಿ ನಿರ್ಮಾಣ ಗೊಂಡಿರುವ ಆಶ್ರಯ ಮನೆಗಳ ಅರ್ಹ ಫಲಾನುಭವಿಗಳಿಗೆ ಲಭಿಸಿವೆಯೇ ; ಫಲಾನುಭವಿಗಳ ಸಂಪೂರ್ಣ ಮಾಹಿತಿ ನೀಡುವುದು ?	ವಿವಿಧ ವಸತಿ ಯೋಜನೆಗಳಡಿ ಫಲಾನುಭವಿಗಳ ಆಯ್ಕೆಯನ್ನು ಗ್ರಾಮೀಣ ಪ್ರದೇಶದಲ್ಲಿ ಗ್ರಾಮ ಸಭೆಯ ಮೂಲಕ ಹಾಗೂ ನಗರ ಪ್ರದೇಶದಲ್ಲಿ ಆಶ್ರಯ ಸಮಿತಿಯ ಮೂಲಕ ನೆರವೇರಿಸಲಾಗುತ್ತಿದೆ. ಆಯ್ಕೆಯಾದ ಫಲಾನುಭವಿಗಳು ತಮ್ಮ ಮನೆಯನ್ನು ಸ್ವತಃ ತಾವೇ ನಿರ್ಮಿಸಿಕೊಳ್ಳಲು ಪ್ರಥಮ ಆದ್ಯತೆಯನ್ನು ನೀಡಲಾಗಿದ್ದು, ಸದರಿ ಮನೆಯ ಭೌತಿಕ ಪ್ರಗತಿಯ ಛಾಯಾಚಿತ್ರಗಳನ್ನು ಜಿಪಿಎಸ್.ಗೆ ಅಳವಡಿಸುವ ವ್ಯವಸ್ಥೆಯನ್ನು ಜಾರಿಗೊಳಿಸಲಾಗಿದೆ.

ನಿಗಮದ ಹಂತದಲ್ಲಿ ಜಿ.ಪಿ.ಎಸ್ ಛಾಯಾಚಿತ್ರಗಳನ್ನು ಆಧರಿಸಿ ಅನರ್ಹರನ್ನು ಗುರುತಿಸಲಾಗಿದ್ದು, ಈವರೆಗೆ ನಿಗಮಕ್ಕೆ 514100 ಪ್ರಸ್ತಾವನೆಗಳು ಸಲ್ಲಿಕೆಯಾಗಿರುತ್ತದೆ. ಈ ಪೈಕಿ 511873 ಪ್ರಸ್ತಾವನೆಗಳನ್ನು ಅನುದಾನ ಬಿಡುಗಡೆಗೆ ಪರಿಗಣಿಸಲಾಗಿದ್ದು, ಇನ್ನೂ 2227 ಪ್ರಸ್ತಾವನೆಗಳನ್ನು ಮರುಪರಿಶೀಲನೆಗಾಗಿ ತಾಲ್ಲೂಕು ಕಾರ್ಯನಿರ್ವಾಹಕ ಅಧಿಕಾರಿಗಳಿಗೆ /ಸ್ಥಳೀಯ ಸಂಸ್ಥೆಗಳಿಗೆ ಹಿಂದಿರುಗಿಸಲಾಗಿದೆ.

ಉಳಿದಂತೆ ಈ ಕೆಳಕಂಡ ಪ್ರಕರಣಗಳನ್ನು ಗುರುತಿಸಲಾಗಿದೆ.

<u>ಹೆಚ್ಚುವೆಚ್ಚದ ಮನೆಗಳು (Building / High Cost):</u>

ನಿಯಮಾನುಸಾರ ಸರ್ಕಾರವು ಪ್ರತಿ ಮನೆಗೆ ನೀಡುವ ಸಹಾಯಧನದ ಜೊತೆಗೆ ಫಲಾನುಭವಿಗಳ ಸ್ವಂತ ವಂತಿಕೆ ಹಣವನ್ನು ಉಪಯೋಗಿಸಿಕೊಂಡು ಗರಿಷ್ಟ 5 ಲಕ್ಷದವರಗೆ ಮನೆ ನಿರ್ಮಿಸಿಕೊಳ್ಳಲು ಅವಕಾಶ ನೀಡಿದೆ. ಆದರೆ ಕೆಲವು ಫಲಾನುಭವಿಗಳು ರೂ.6.00 ರಿಂದ ರೂ.20.00 ಲಕ್ಷಕ್ಕೂ ಹೆಚ್ಚು ಅನುದಾನ ವಿನಿಯೋಗಿಸಿ ಮನೆ ನಿರ್ಮಿಸುತ್ತಿರುವ ಕಾರಣ, ಅನರ್ಹರೆಂದು ಪರಿಗಣಿಸಿ ಅನುದಾನವನ್ನು ತಡೆಯಿಡಿಯಲಾಗಿದೆ. ರಾಜ್ಯದಲ್ಲಿ ಇಂತಹ ಒಟ್ಟು 410 ಪ್ರಕರಣಗಳನ್ನು ಗುರುತಿಸಲಾಗಿದೆ.

<u>ಮನೆವಿಸ್ತರಣೆ (House Extension):</u>

ವಾಸಕ್ಕೆ ಈಗಾಗಲೇ ಸ್ವಂತ ಮನೆ ಹೊಂದಿರುವ ಫಲಾನುಭವಿಯು ತನ್ನ ಮನೆಯನ್ನು ವಿಸ್ತರಣೆ ಮಾಡಿಕೊಳ್ಳುತ್ತಿರುವ ಫಲಾನುಭವಿಗಳನ್ನು ಅನರ್ಹರೆಂದು ಪರಿಗಣಿಸಿ ಅನುದಾನವನ್ನು ತಡೆಹಿಡಿಯಲಾಗಿದೆ. ರಾಜ್ಯದಲ್ಲಿ ಇಂತಹ ಒಟ್ಟು 49 ಪ್ರಕರಣಗಳನ್ನು ಗುರುತಿಸಲಾಗಿದೆ.

<u>ಹಳೆ ಮನೆಗಳು / ಹಂತವಾರು ಛಾಯಾಚಿತ್ರವಿಲ್ಲದ ಮನೆಗಳು (Old House Or Required Stage wise Photo):</u>

		ಸುಮಾರು ವರ್ಷದ ಹಿಂದೆ ನಿರ್ಮಿಸಿರುವ ಹಳೇ ಮನೆಗಳನ್ನು ಜಿ.ಪಿ.ಎಸ್.ಗೆ ಅಳವಡಿಸಿರುವ ಕಾರಣ ಮತ್ತು ಮನೆ ನಿರ್ಮಾಣಕ್ಕೆ ಸಂಬಂಧಪಟ್ಟಂತೆ 4 ಹಂತದ ಜಿ.ಪಿ.ಎಸ್. ಛಾಯಾಚಿತ್ರಗಳನ್ನು ಅಳವಡಿಸದೇ, ಹಾಲಿ ಇರುವ ಮನೆಯನ್ನೇ ಜಿ.ಪಿ.ಎಸ್.ಗೆ ಅಳವಡಿಸಿರುವ ಕಾರಣ ಅಂತಹ ಫಲಾನುಭವಿಗಳನ್ನು ಅನರ್ಹರೆಂದು ಪರಿಗಣಿಸಿ ಅನುದಾನವನ್ನು ತಡೆಹಿಡಿಯಲಾಗಿದೆ. ರಾಜ್ಯದಲ್ಲಿ ಇಂತಹ ಒಟ್ಟು 1583 ಪ್ರಕರಣಗಳನ್ನು ಗುರುತಿಸಲಾಗಿದೆ. **ವಾಸಯೇತರ ಉದ್ದೇಶದ ಮನೆಗಳು (Non Residential):** ನಿರ್ಮಿಸುತ್ತಿರುವ ಮನೆಯನ್ನು ವಾಸೇತರ ಉದ್ದೇಶಕ್ಕಾಗಿ ಬಳಸಿಕೊಳ್ಳುತ್ತಿರುವುದಾಗಿ ಕಂಡು ಬಂದ ಫಲಾನುಭವಿಗಳು ಅನರ್ಹರೆಂದು ಪರಿಗಣಿಸಿ ಅನುದಾನವನ್ನು ತಡೆಹಿಡಿಯಲಾಗಿದೆ. ರಾಜ್ಯದಲ್ಲಿ ಇಂತ ಒಟ್ಟು 185 ಪ್ರಕರಣಗಳನ್ನು ಗುರುತಿಸಲಾಗಿದೆ. ಒಂದು ವೇಳೆ ವಾಸ್ತವಿಕವಾಗಿ ನಿರ್ಮಾಣಗೊಂಡಿರುವ ಮನೆಯು ಅರ್ಹವಿರುವುದು ಕಂಡುಬಂದಲ್ಲಿ, ಸ್ಥಳೀಯ ಸಂಸ್ಥೆ/ ತಾಲ್ಲೂಕು ಮಟ್ಟದ ಅಧಿಕಾರಿಗಳ ದೃಢೀಕರಣಗೊಂದಿಗೆ, ನಿಗದಿತ ನಮೂನೆಯಲ್ಲಿ ಪ್ರಸ್ತಾವನೆಯನ್ನು ಜಿಲ್ಲಾಪಂಚಾಯತಿಯ ಮುಖ್ಯಕಾರ್ಯನಿರ್ವಹಣಾಧಿಕಾರಿಗಳು / ಜಿಲ್ಲಾಧಿಕಾರಿಗಳು DSC ಮೂಲಕ ಅನುಮೋದಿಸಿ ಆನ್ಲೈನ್ನಲ್ಲಿ ನಿಗಮಕ್ಕೆ ಸಲ್ಲಿಸಿದಲ್ಲಿ, ಪರಿಶೀಲಿಸಿ ಅರ್ಹರಿದ್ದಲ್ಲಿ ಅನುದಾನ ಬಿಡುಗಡೆಗೊಳಿಸಲು ಕ್ರಮವಹಿಸಲಾಗುತ್ತಿದೆ. ಫಲಾನುಭವಿವಾರು ವಿವರಗಳನ್ನು ಅನುಬಂಧ-2ರಲ್ಲಿ ನೀಡಲಾಗಿದೆ(ಸಿ.ಡಿ).

ವ ಇ 49 ಹೆಚ್ಎಂ 2020

(ವಿ. ಸೋಮಣ್ಣ)